sdmimd

**Mysooru Mitra**

Date: Feb 04, 2016 Page No. 2

Edition: Mysore Language: Kannada

# ಉದ್ಯಮ ಸ್ಥಾಪನೆ ಲಾಭ ಗಳಿಕೆಯೊಂದನ್ನೇ ಉದ್ದೇಶವಾಗಿರಿಸಿಕೊಂಡಿರಬಾರದು

## ಎನ್.ಆರ್.ಗ್ರೂಪ್ ವ್ಯವಸ್ಥಾಪಕ ಪಾಲುದಾರ ಅರ್ಜುನ್ ಎಂ.ರಂಗ ಕಿವಿಮಾತು

ಮೈಸೂರು, ಫೆ.3(ನಕು)–ಲಾಭ ಗಳಿಕೆಯೊಂದೇ ಪ್ರಮುಖ ಉದ್ದೇಶವಾಗಬಾರದೆಂದು ಎನ್.ಆರ್.ಗ್ರೂಪ್ ವ್ಯವಸ್ಥಾಪಕ ಪಾಲುದಾರ ಅರ್ಜುನ್ ಎಂ.ರಂಗ ಕಿವಿಮಾತು ಹೇಳಿದರು. ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ 'ಉದ್ಯಮ ಶೀಲತೆ ಕುರಿತ ಸ್ಟಾರ್ಟ್‌ಅಪ್' ಕುರಿತು ಬುಧವಾರ ಹಮ್ಮಿಕೊಂಡಿದ್ದ ಚರ್ಚಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನೂತನ ಕಂಪನಿ ಆರಂಭಿಸುವಾಗ ಲಾಭ ಗಳಿಸುವುದೊಂದೇ ಪ್ರಮುಖ ಉದ್ದೇಶವಾಗಬಾರದು. ಪಾರದರ್ಶಕತೆ, ಸಮಾಜಮುಖಿ ಚಿಂತನೆ ಇಟ್ಟುಕೊಂಡು ಕೆಲಸ ಮಾಡಬೇಕು. ತಮ್ಮ ತಾತಾ ಅವರ ಕಾಲದಲ್ಲಿ ಆರಂಭವಾದ ಅಗರಬತ್ತಿ ಕಂಪನಿ ಪಾರದರ್ಶಕತೆ, ತೆರಿಗೆ, ಹಣಕಾಸಿನ ವಿಚಾರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡಿದ್ದರಿಂದ ಉನ್ನತ ಮಟ್ಟಕ್ಕೆ ಬೆಳೆಯಲು ಸಾಧ್ಯವಾಯಿತು ಎಂದು ತಿಳಿಸಿದರು.

ಬಳಿಕ ಉದ್ಯಮಶೀಲತೆ ಕುರಿತ ಸ್ಟಾರ್ಟ್‌ಅಪ್ ಚರ್ಚೆ ನಡೆಯಿತು. ಚರ್ಚೆಯಲ್ಲಿ ಎಸ್‌ಡಿಎಂಐಎಂಡಿ ಸಿಇಓ ಡಾ.ಹೆಚ್.ಎಸ್.ರಾಘವೇಂದ್ರ, ಅಧ್ಯಾಪಕರಾದ ಪ್ರೊ.ರಾಜೇಂದ್ರ ತೊದಲ್ಬಾಗಿ, ಸುಧೀರ್ ಸೋಸಲೆ ಭಾಗವಹಿಸಿದ್ದರು. ಎಸ್‌ಡಿಎಂಐಎಂಡಿ ನಿರ್ದೇಶಕ ಪರಶುರಾಮ್, ಉಪ ನಿರ್ದೇಶಕಿ ಡಾ.ಗಾಯತ್ರಿ, ಕಾರ್ಯಕ್ರಮ ಸಂಯೋಜಕ ಡಾ.ಎಂ.ಆರ್.ಸುರೇಶ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

**Entrepreneurship- Startup Charcha**